## ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

### (ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ)

### ಹೆಚ್ಚುವರಿ ಅಧಿಸೂಚನೆ

**ಸಂಖ್ಯೆ: ಲೋಇ 112 ಇಎಪಿ 2012(ಪಿ1) ದಿನಾಂಕ: 29-07-2015**

ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15 ರ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳು ಬಿ.ಆರ್.ಟಿ.ಎಸ್. ಯೋಜನೆಗಾಗಿ ಧಾರವಾಡ ಶಹರದಲ್ಲಿ ಬಿ.ಆರ್.ಟಿ.ಎಸ್ ಬಸ್ ನಿಲ್ದಾಣ (Terminal) ನಿರ್ಮಿಸುವ ಉದ್ದೇಶಕ್ಕಾಗಿ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಜಮೀನುಗಳು ಬಿ.ಆರ್.ಟಿ.ಎಸ್ ಬಸ್ ನಿಲ್ದಾಣ (Terminal) ನಿರ್ಮಿಸಲು ಅವಶ್ಯವಾಗಿವೆ ಎಂದು ಸರ್ಕಾರವು ಮನಗಂಡಿದೆ. ಆದುದರಿಂದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳು ಬಿ.ಆರ್.ಟಿ.ಎಸ್ ಬಸ್ ನಿಲ್ದಾಣ (Terminal) ನಿರ್ಮಿಸಲು ಅವಶ್ಯಕವಾಗಿವೆ ಎಂದು ಈ ಮೂಲಕ ಘೋಷಿಸಲಾಗಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ 1964 ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಅಥವಾ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲಿ ಅಥವಾ ಅಡ್ಡಿಪಡಿಸುವುದಾಗಲಿ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು (ರಾಜ್ಯ ಹೆದ್ದಾರಿ ಪ್ರಾಧಿಕಾರ) ರವರ ಅನುಮತಿಯಿಲ್ಲದೇ ಸದರಿ ಜಮೀನುಗಳನ್ನು ವಿಲೆ ಮಾಡುವ ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್, ಅದಲು ಬದಲು ವಗೈರೆ ಮಾಡುವಂತಿಲ್ಲ. ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ, ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗದಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ಜಮೀನುಗಳ ವಿವರಗಳನ್ನು ಪರಿಶೀಲನೆಗಾಗಿ ವಿಶೇಷ ಭೂಸ್ವಾಧೀನ ಅಧಿಕಾರಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ರಾಯಾಪುರ ಧಾರವಾಡ ಮತ್ತು ಕಾರ್ಯಪಾಲಕ ಇಂಜಿನಿಯರ್ ಕೆಆರ್‌ಡಿಸಿಎಲ್, ಯೋಜನಾ ಕಛೇರಿ ಹುಬ್ಬಳ್ಳಿ ಮತ್ತು ಧಾರವಾಡ ತಹಶೀಲ್ದಾರ್‌ರವರ ಕಛೇರಿಯಲ್ಲಿ ಇಡಲಾಗಿದೆ.

| ಅ. ಸಂ. | ಖಾತೆದಾರರ ಹೆಸರು (ಪ್ರಾಪರ್ಟಿ ಕಾರ್ಡ ಪ್ರಕಾರ) | ಸಿ.ಟಿ.ಎಸ್. ನಂ. | ಪ್ರಾಪರ್ಟಿ ಕಾರ್ಡ ಪ್ರಕಾರ ಜಮೀನಿನ ಒಟ್ಟು ವಿಸ್ತೀರ್ಣ (ಚ. ಮೀ.) | ತರಹೆ (ಶೇತ್ಕಿ/ಬಿನ್‌ಶೇತ್ಕಿ/ವಸತಿ/ವಾಣಿಜ್ಯ) | ಆಕಾರ ರೂ. | ಆಕಾರ ಪೈ | ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರ ( ಚ. ಮೀ.) | ಚಕಬಂದಿ ಪೂರ್ವ | ಚಕಬಂದಿ ಪಶ್ಚಿಮ | ಚಕಬಂದಿ ಉತ್ತರ | ಚಕಬಂದಿ ದಕ್ಷಿಣ | ಶರಾ |
|---|---|---|---|---|---|---|---|---|---|---|---|---|
| 1 | 2 | 3 | | 4 | 6 | 7 | 5 | 8 | 9 | 10 | 11 | 12 |
| | **ಗ್ರಾಮ : ಧಾರವಾಡ ಶಹರ** | | | | | | **ಜಿಲ್ಲೆ: ಧಾರವಾಡ** | | | | | |
| 1 | ಮೂಲ ಹಕ್ಕು: ಕರ್ನಾಟಕ ಸರ್ಕಾರ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹಾಗೂ ಪಾಲಿಕೆಯ ಜಾಗೆಯಲ್ಲಿ ಪೈಕಿ ಜಾಗೆಯ ಭೂ ಬಾಡೇದಾರ : ಮಿತ್ರ ಸಮಾಜ | 161ಎ | 3540.15 | ಖುಷ್ಕಿ | 13.00 | 0 | 2357.25 | ರಸ್ತೆ | ಉಳಿದ ಜಾಗೆ | ರಸ್ತೆ | ರಸ್ತೆ | |
| 2 | ಮೂಲ ಹಕ್ಕು: ಕರ್ನಾಟಕ ಸರ್ಕಾರ ಭೂ ಬಾಡೇದಾರ : 1) ವಿಲಾಸ, 2) ಪ್ರಮೋದ. | 161 ಬಿ | 146.32 | ಖುಷ್ಕಿ | - | - | 146.32 | ರಸ್ತೆ ಹಾಗೂ ಸಿ.ಟಿ.ಎಸ್. | ಸಿ.ಟಿ.ಎಸ್. ನಂ. 161/ಎ | ರಸ್ತೆ | ಸಿ.ಟಿ.ಎಸ್. ನಂ. 161/ಎ | |

| ಅ. ಸಂ. | ಖಾತೆದಾರರ ಹೆಸರು (ಪ್ರಾಪರ್ಟಿ ಕಾರ್ಡ ಪ್ರಕಾರ) | ಸಿ.ಟಿ.ಎಸ್. ನಂ. | ಪ್ರಾಪರ್ಟಿ ಕಾರ್ಡ ಪ್ರಕಾರ ಜಮೀನಿನ ಒಟ್ಟು ವಿಸ್ತೀರ್ಣ (ಚ. ಮೀ.) | ತರಹೆ (ಶೇತ್ಕಿ/ಬಿನ್‌ಶೇತ್ಕಿ/ವಸತಿ/ವಾಣಿಜ್ಯ) | ಆಕಾರ | | ಭೂ ಸ್ವಾಧೀನಕ್ಕೆ ಒಳಪಡುವ ಕ್ಷೇತ್ರ ( ಚ. ಮೀ.) | ಚಕಬಂದಿ | | | | ಶರಾ |
|---|---|---|---|---|---|---|---|---|---|---|---|---|
| | | | | | ರೂ. | ಪೈ | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | 2 | 3 | | 4 | 6 | 7 | 5 | 8 | 9 | 10 | 11 | 12 |
| | 3) ಅಜಿತ್ ತಂದೆ ತುಕಾರಾಮ ಗಾಂವಕರ್ | | | | | | | ನಂ. 161/ಎ | | | | |
| | ಒಟ್ಟು | | 3686.47 | | | | 2503.57 | | | | | |

**ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15ರ ಕೆಳಗೆ**

**ಘೋಷ್ವಾರೆ**

| ಅ.ಸಂ. | ಗ್ರಾಮ/ನಗರ | ತಾಲ್ಲೂಕು | ಜಿಲ್ಲೆ | ಭೂಸ್ವಾಧೀನಕ್ಕೊಳಪಡುವ ಕ್ಷೇತ್ರ (ಚ.ಮೀ.ಗಳಲ್ಲಿ) |
|---|---|---|---|---|
| 1 | ಧಾರವಾಡ ಶಹರ | ಧಾರವಾಡ | ಧಾರವಾಡ | 2503.57 |
| ಒಟ್ಟು ಕ್ಷೇತ್ರ | | | | 2503.57 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಇಂ. ವಿಜಯ್. ಛೀ. ಚಂದಾಪುರ,
ಸರ್ಕಾರದ ಅಧೀನ ಕಾರ್ಯದರ್ಶಿ
ಬಾಹ್ಯ ಅನುದಾನಿತ ಯೋಜನೆಗಳು (EAP)
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲ ಸಾರಿಗೆ ಇಲಾಖೆ

PR - 783
SC - 200

**ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ**

**1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ಕಲಂ 28(4)ರಡಿ ಅಧಿಸೂಚನೆ**

**ಸಂಖ್ಯೆ: ಸಿಐ 74 ಎಸ್‌ಪಿಕ್ಯೂ 2015 ಬೆಂಗಳೂರು, ದಿನಾಂಕ: 24-07-2015**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 1966) (ಈ ಮುಂದೆ ಪ್ರಸ್ತುತ ಕಾಯ್ದೆ ಎಂದು ಹೇಳಲಾಗಿದೆ) ಕಲಂ 28(1)ರನ್ವಯ ವಿಹಿತವಾದ ಅಧಿಕಾರದಡಿ ಅಧಿಸೂಚನೆ ಸಂಖ್ಯೆ: ಸಿಐ 512 ಎಸ್‌ಪಿಕ್ಯೂ 2012, ದಿನಾಂಕ: 09-05-2013 ( ಈ ಮುಂದೆ ಅಧಿಸೂಚನೆ ಎಂದು ಹೇಳಲಾಗಿದೆ) ರಂದು ಹೊರಡಿಸಿ, ದಿನಾಂಕ: 10-05-2013ರಂದು ಪ್ರಕಟವಾದ ರಾಜ್ಯಪತ್ರದ ಭಾಗ-3ರ ಪುಟ 1ರಿಂದ 04ವರೆಗೆ ಕರ್ನಾಟಕ ಸರ್ಕಾರವು ಪ್ರಸ್ತುತ ಅಧಿಸೂಚನೆಯಲ್ಲಿ ಕಾಣಿಸಿರುವ ಬಾಗಲಕೋಟೆ ಜಿಲ್ಲೆ, ಬದಾಮಿ ತಾಲ್ಲೂಕು, ಕೋಟೆಕಲ್ಲ ಗ್ರಾಮದಲ್ಲಿ ಮೆ॥ ಕೆ.ಎನ್.ಕೆ. ಕಾರ್ಪೊರೇಷನ್ ಪ್ರೈ. ಲಿಮಿಟೆಡ್ ಇವರಿಗಾಗಿ 1.2 MTPA Pellet Plant and Stainless Steel with Co-Generation of Power-35 ಸ್ಥಾಪಿಸುವ ಸಲುವಾಗಿ ಪ್ರಸ್ತುತ ಅಧಿಸೂಚನೆಯಲ್ಲಿ ಕಾಣಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ತನ್ನ ಉದ್ದೇಶವನ್ನು ಪ್ರಕಟಿಸಿತ್ತು.